**ಮುಂದುವರೆದ ಪಾಟೀ ಸವಾಲು ಃ ವಾದಿಗಳ ಪರ ವಕೀಲರಾದ**
**ಶ್ರೀ ಕೆ ಟಿ ಎಸ್ ರವರಿಂದ ಃ-**
**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಡಿ.ಡಬ್ಲ್ಯೂ. 1. ದಿಃ 01-12-2018. ಓ ಎಸ್ ನಂ ಃ 51/2007**

1 ರಿಂದ 4ನೇ ಪ್ರತಿವಾದಿಗಳು ಅಬ್ಬತ್ತನಹಳ್ಳಿಯ ನಾಯಕರ ರಂಗಯ್ಯನ ವಾರಸುದಾರರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿಲ್ಲ. ಸದರಿ ವಾರಸತ್ವವನ್ನು ತೋರಿಸಲು ಯಾವುದೇ ಸಾಕ್ಷ್ಯವನ್ನು ಸಹಾ ಕೊಡಿಸಿಲ್ಲ. ಸದರಿ ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನಿಗೆ ದಾವಾ ಆಸ್ತಿಯನ್ನು ಪ್ರತಿವಾದಿ 1 ರಿಂದ 4 ರವರಿಗೆ ಮಾರಾಟ ಮಾಡುವ ಹಕ್ಕು ಇತ್ತು ಎನ್ನುವುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಮತ್ತು ಸಾಕ್ಷ್ಯವನ್ನು ಕೊಡಿಸಿರುವುದಿಲ್ಲ. ಎಂ ಆರ್ ನಂ.25/1981-1982ರ ಹಕ್ಕು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಿಃ 10-10-1941 ರಲ್ಲಿ ಕಳ್ಳಿಪಾಳ್ಯ ಗ್ರಾಮದ ರಂಗನಾಯಕ ಬಿನ್ ಕೋಡಪ್ಪ ಎನ್ನುವವರು ಸರ್ವೆ ನಂ. 41/4 ರಲ್ಲಿ 4 ಎಕರೆ 4 ಗುಂಟೆ ಜಮೀನನ್ನು ಬಾಗೂರಯ್ಯ ಬಿನ್ ರಂಗನಾಯ್ಕ ಎನ್ನುವವರಿಂದ ಚಿಕ್ಕ ರೇವಣ್ಣ ರವರಿಗೆ ನಿಪಿ 16 ರಂತೆ ಭೋಗ್ಯವಾಗಿತ್ತು ಎನ್ನುವ ವಿಚಾರ ನನಗೆ ಗೊತ್ತಿಲ್ಲ.

ಬಾಗೂರಯ್ಯನ ತಂದೆಯ ಹೆಸರು ರಂಗನಾಯ್ಕ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ಮಾಲೀಕರಾದಂತಹ ರಂಗನಾಯ್ಕನ ಕಾನೂನುಬದ್ಧ ವಾರಸುದಾರರು ಫವತಿ ಬಾಗೂರಯ್ಯನ ಮಕ್ಕಳಾದ ಈ ಕೇಸ್‌ನ ವಾದಿಗಳು ಮತ್ತು ಅವರು ದಾವಾ ಆಸ್ತಿಯ ಕಾನೂನು ಬದ್ದ ವಾರಸುದಾರರು ಎಂದರೆ ಸರಿಯಲ್ಲ. ವಾದಿಗಳು ಈಗಲೂ ಸಹಾ ದಾವಾ ಆಸ್ತಿಗಳಲ್ಲಿ ಬೆಳೆಗಳನ್ನು ಬೆಳೆಯುತ್ತಾ

ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿಯಲ್ಲ. ನನ್ನ ಮಾರಾಟಗಾರರಾದ ಓಲೇಕಾರ ರಂಗಯ್ಯನ ಮಗ ರಾಮಯ್ಯ ಎನ್ನುವವರಿಗೆ ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ಬಾಕಿ ಇರಬೇಕಾದರೆ ದಿಃ19-11-2015 ರಂದು ಸುಳ್ಳು ಜಿಪಿಎ ನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಸದರಿ ಜಿ ಪಿ ಎ ನ್ನು ಹೊಂದಿರುವಂತಹ 6ನೇ ಪ್ರತಿವಾದಿ ಮತ್ತು ನಾಗಭೂಷಣ್ ಎನ್ನುವವರು ಇದೇ 6ನೇ ಪ್ರತಿವಾದಿಗೆ ದಿ ಃ 10-03-2016 ರಂದು ದಾವಾ ಸ್ವತ್ತನ್ನು 15,20,000/- ರೂಗಳಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಜಿ ಪಿ ಎ ಮತ್ತು ಸದರಿ ಕ್ರಯಪತ್ರವನ್ನು ನ್ಯಾಯಾಲಯದ ಅನುಮತಿ ಇಲ್ಲದೇ ಮತ್ತು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಬರೆದುಕೊಂಡಿರುತ್ತೇವೆಂದರೆ ಸರಿಯಲ್ಲ. ಸದರಿ ಮಾರಾಟದ ಮೊತ್ತ ರೂ. 15,20,000/- ರೂಗಳನ್ನು ನಾನು ಪಡೆದುಕೊಂಡಿರುತ್ತೇನೆಂದರೆ ಸರಿ.

ನಾನು, 6ನೇ ಪ್ರತಿವಾದಿ ಮತ್ತು ನಾಗಭೂಷಣ್ ಹಾಗೂ ಇತರರು ಸೇರಿ ಒಳಸಂಚು ಮಾಡಿ 6ನೇ ವಾದಿಗೆ ಹಣದ ಆಮೀಷ ಮತ್ತು ಪ್ರಾಣ ಬೆದರಿಕೆ ಹಾಕಿ ಒತ್ತಡಕ್ಕೆ ಸಿಲುಕಿಸಿದ್ದೆವು ಎಂದರೆ ಸರಿಯಲ್ಲ. ದಿಃ 08-01-2018 ರಂದು ಈ ಕೇಸ್‌ನ 6ನೇ ವಾದಿ ಸಿದ್ದಲಿಂಗಯ್ಯನಿಂದ ದಾವಾ ಸ್ವತ್ತಿನ ಮಾಲೀಕರಾದ ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನ ವಾರಸುದಾರರಾದ ವಾದಿಗಳು ಮತ್ತು ವಂಶಸ್ಥರಿಗೆ ದೂರವಾಣಿ ಕರೆ ಮಾಡಿ ಕರೆಯಿಸಿಕೊಂಡು ದಾವಾ ಆಸ್ತಿಗೆ ಜಿ ಪಿ ಎ ಪಡೆದುಕೊಳ್ಳುತ್ತಿರುವುದಾಗಿ ನಂಬಿಸಿ ನೋಂದಣಾಧಿಕಾರಿಗಳ ಕಚೇರಿಯಲ್ಲಿ ದಿಃ 10-03-2016 ರಲ್ಲಿ 6ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯಪತ್ರಕ್ಕೆ 6ನೇ ವಾದಿಯ

ಒಪ್ಪಿಗೆ ಇರುವುದಾಗಿ ಒಪ್ಪಿಗೆ ಪತ್ರವನ್ನು ಮೋಸದಿಂದ ಸೃಷ್ಟಿಸಲು ನಾನು ಸಹಾ ಕಾರಣನಾಗಿದ್ದೇನೆಂದರೆ ಸರಿಯಲ್ಲ.

ನಿಡಿ 33 ನ್ನು ಯಾವುದೇ ಪ್ರತಿಫಲ ಪಡೆಯದೇ 6ನೇ ಪ್ರತಿವಾದಿಯ ಹೆಸರಿಗೆ ವಾದಿಗಳಿಂದ ಬರೆಯಿಸಿಕೊಂಡಿದ್ದೇವೆಂದರೆ ಸರಿಯಲ್ಲ. ನಮ್ಮ ವಿರುದ್ಧ ಪಿ ಸಿ ಆರ್ ನಂ. 2/18 ದಾಖಲಾಗಿದೆ ಎಂದರೆ ಸರಿ. ಸದರಿ ಪಿ ಸಿ ಆರ್ ಆಧಾರದ ಮೇಲೆ ಪ್ರ ವ ವರದಿ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರ ವ ವರದಿಯ ಆಧಾರದ ಮೇಲೆ ನಾವು ನಿರೀಕ್ಷಣಾ ಜಾಮೀನನ್ನು ಕೋರಿ ತುಮಕೂರಿನ ಜಿಲ್ಲಾ ನ್ಯಾಯೊಲಯಕ್ಕೆ ಕೋರಿಕೆ ಸಲ್ಲಿಸಿದ್ದೆವು ಎಂದರೆ ಸರಿ. ನಿ ಡಿ 33 ರಲ್ಲಿ ಪ್ರಸ್ತುತ ದಾವೆ ಪಕ್ಷಗಾರರನ್ನು ಹೊರತುಪಡಿಸಿ ಬೇರೆಯವರೂ ಸಹಾ ಸಹಿ ಹಾಕಿರುತ್ತಾರೆಂದರೆ ಸರಿ.

**ಮರುವಿಚಾರಣೆ- ಇಲ್ಲ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇಳಿ ಕೇಳಿ ಸರಿ ಇದೆ.**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ಗುಬ್ಬಿ**